**ಅಸಲು ದಾವ ಸಂಖ್ಯೆಃ 758/2012**

ಪಿ .ಡಬ್ಲೂ **-1**

**ದಿಃ 08-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಪಾಟೀ ಸವಾಲು ಪ್ರತಿವಾದಿಪರ ವಕೀಲರಾದ ಶ್ರೀ AMP ರವರಿಂದಃ-**

ಈ ದಾವೆಯಲ್ಲಿ ನನ್ನ ಪಾಟೀ ಸವಾಲು ಈಗಾಗಲೇ ಆಗಿರುತ್ತದೆ ಎಂದರೆ ಸರಿ. ನನ್ನ ಜಮೀನಿನ ಸರ್ವೇ ನಂಬರ್ 718/ 2 ರಲ್ಲಿ 36 ಗುಂಟೆ ಹಾಗೂ 718/5 ರಲ್ಲಿ 20 ಗುಂಟೆ ಇರುತ್ತದೆ. ಸದರಿ ಜಮೀನು ದಾಮಣೆ ಊರಿನಲ್ಲಿ ಇರುತ್ತದೆ. ನಾನು ಹಲಗಾದ ಬಸ್ತವಾಡದಲ್ಲಿ ವಾಸಮಾಡುತ್ತೇನೆ. ಹಲಗಾ- ಬಸ್ತವಾಡ ಹಾಗೂ ಜಮೀನಿಗೆ ಸುಮಾರು 3 ಕಿ.ಮೀ. ಅಂತರ ಇರುತ್ತದೆ. ಸದರಿ ಜಮೀನನ್ನು ವ್ಯವಸಾಯ ಮಾಡುವ ಸಲುವಾಗಿ ಮಾರುತಿ ಮರಗಾನ್ನಾಚೆ ರವರ ಅಜ್ಜನಿಗೆ ನೀಡಲಾಗಿತ್ತು. ಸದರಿ ಜಮೀನನ್ನು ರೂ.12000/- ಗಳಿಗೆ ಸದರಿಯವರಿಗೆ ಅಡಮಾನ ಮಾಡಲಾಗಿತ್ತು. ಸದರಿ ಅಡಮಾನ ಮಾಡಿದ ಬಗ್ಗೆ ನನ್ನ ಬಳಿ ಕಾಗದ ಪತ್ರ ಇರುವುದಿಲ್ಲ ಆದರೆ, ನನ್ನ ತಂದೆ ಸದರಿ ಅಡಮಾನ ವ್ಯವಹಾರದ ಬಗ್ಗೆ ನನಗೆ ಹೇಳಿದ್ದರು. ಸದರಿ ಜಮೀನನ್ನು ಅಡಮಾನ ಮಾಡಿ ಸುಮಾರು 70 ವರ್ಷಗಳಾಗಿವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸುಮಾರು 20 ವರ್ಷ ಆಗಿರಬಹುದು ಎಂದು ನುಡಿಯುತ್ತಾರೆ.

ಸದರಿ ಜಮೀನಿನ ವ್ಯವಸಾಯ ವನ್ನು ಈಗ ನಾವೇ ಮಾಡುತ್ತೇವೆ ಹಾಗೂ ಅದರ ಕಬ್ಜೆ ನಮ್ಮ ಬಳಿ ಇರುತ್ತದೆ. ಸದರಿ ಜಮೀನನ್ನು ಮಾರುತಿ ಮರಗಾನ್ನಾಚೆ ರವರ ತಂದೆಗೆ ನಮ್ಮ ತಂದೆ ಮಾರಾಟ ಮಾಡುವುದಾಗಿ ಹೇಳಿ ಅದರ ಕುರಿತು ಖರೀದಿ ಕರಾರು ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆಗೆ 1981 ರಲ್ಲಿ ಮಾರುತಿ ಮರಗಾನ್ನಾಚೆ ರವರ ತಂದೆ ಬಾಳುರವರು 5000/- ರೂಗಳನ್ನು ಖರೀದಿ ಕರಾರುಪತ್ರಕ್ಕೆ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಒಟ್ಟು 12,100/- ರೂ.ಗಳನ್ನು ಕಂತು ಕಂತಾಗಿ ಪಡೆದು 1985 ರಲ್ಲಿ ನನ್ನ ತಂದೆ

ಬಾಳು ರವರ ಹೆಸರಿಗೆ ಖರೀದಿ ಕರಾರುಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಜಮೀನಿನಲ್ಲಿ ಬಸವೇಶ್ವರ ದೇವಸ್ಥಾನ ಕಟ್ಟುವ ಸಲುವಾಗಿ ತನ್ನ ತಂದೆ 12,000/-ರೂ ಗಳನ್ನು ಪಡೆದಿದ್ದರು ಎಂದು ನುಡಿಯುತ್ತಾರೆ.

ಸರ್ವೇ ನಂ.718/ 2 ಹಾಗೂ 718/5 ಜಮೀನಿನ ಒಟ್ಟು ಕ್ಷೇತ್ರ 1 ಎಕರೆ 16ಗುಂಟೆ ಇರುತ್ತದೆ. ಸದರಿ ಜಮೀನುಗಳು 2 ಭಾಗದಲ್ಲಿ ಇರುತ್ತವೆ. 2 ಜಮೀನುಗಳಿಗೆ ಸೇರಿ ಒಂದೇ ಚಕ್ಕುಬಂದಿ ಇರುತ್ತದೆ, ಪೂರ್ವಕ್ಕೆ - ದತ್ತು ಪಾಟೀಲರವರ ಜಮೀನು, ಪಶ್ಚಿಮಕ್ಕೆ - ಇಸ್ಮಾಯಿಲ್ ಅಬ್ದುಲ್ ಸಾಬ್ ಮುಲ್ಲಾ ರವರ ಜಮೀನು, ದಕ್ಷಿಣಕ್ಕೆ - ಬಾಬು ಪಾಟೀಲ ರವರ ಜಮೀನು, ಉತ್ತರಕ್ಕೆ - ಗಾಡಿ ಮಾರ್ಗ ಇರುತ್ತದೆ.

9,000/- ರೂ.ಗಳಿಗೆ ಒಂದು ಎಕರೆಯಂತೆ ಮಾತನಾಡಿ ಒಟ್ಟು 1 ಎಕರೆ 16 ಗುಂಟೆಗೆ 12,600/- ರೂ. ಎಂದು ನಿರ್ಧರಿಸಿ ನನ್ನ ತಂದೆಯು ಮರಗನ್ನಾಚೆ ರವರಿಗೆ ಮಾರಾಟ ಮಾಡುವ ಸಲುವಾಗಿ ಖರೀದಿ ಕರಾರುಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮೊತ್ತದ ಪೈಕಿ 12,100/- ರೂ. ಗಳನ್ನು ಖರೀದಿಯ ಕಡೆಗೆ ನನ್ನ ತಂದೆ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದು ಖರೀದಿಯ ಕಡೆಗೆ ಅಲ್ಲ ಬದಲಾಗಿ ಅಡಮಾನ ವ್ಯವಹಾರದ ಕಡೆಗೆ 12,100/- ರೂ.ಗಳನ್ನು ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ದಾಖಲೆಯ ಮೇಲೆ ಸಹಿ ಮಾಡುತ್ತಿದ್ದು ಹಾಗೂ ಹೆಬ್ಬಟ್ಟಿನ ಗುರುತನ್ನು ಹಾಕುತ್ತಿರಲಿಲ್ಲ. ನನ್ನ ತಂದೆಯು ಹೆಬ್ಬಟ್ಟಿನ ಗುರತನ್ನೇ ಹಾಕುತ್ತಿದ್ದರು ಎಂದರೆ ಸರಿಯಲ್ಲ. ನಾನು ಈಗ ಅಸಲುದಾವಾ ಸಂಖ್ಯೆ 725/2013 ರಲ್ಲಿನ ನಿಪಿ-3ನೇ ದಾಖಲೆ ನೋಡುತ್ತಿದ್ದು ಅದರಲ್ಲಿ ನನ್ನ ತಂದೆ ಹೆಬ್ಬಟ್ಟಿನ ಗುರುತನ್ನು ಹಾಕಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-3 ದಾಖಲೆಗೆ ನನ್ನ ತಂದೆ ಹೆಬ್ಬಟ್ಟಿನ ಗುರುತನ್ನು ಹಾಕಿ ಖರೀದಿ ಕರಾರುಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕರಾರುಪತ್ರಕ್ಕೆ 5 ಜನ ಸಾಕ್ಷಿದಾರರು ಸಹ ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ

ಕರಾರುಪತ್ರದ ಪ್ರಕಾರ 500/- ರೂ.ಗಳನ್ನು ಪಡೆದು ಮಾರುತಿ ಮರಗನ್ನಾಚೆ ರವರ ತಂದೆ ಬಾಳು ಮರಗನ್ನಾಚೆ ರವರಿಗೆ ಖರೀದಿ ಪತ್ರ ಮಾಡಿಕೊಡಬೇಕಾಗುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅಡಮಾನದ ಕಡೆ 12,000/- ರೂ.ಗಳನ್ನು ಈಗಾಗಲೇ ಕೊಟ್ಟು ಜಮೀನಿನ ಕಬ್ಜೆ ತಾನು ಪಡೆದಿರುವುದಾಗಿ ನುಡಿಯುತ್ತಾರೆ.

ನಾನು ಮೂಲತಹ ದಾಮಣೆ ಊರಿಗೆ ಸೇರಿದವನು ಎಂದರೆ ಸರಿ. ನಿಪಿ-3 ರಲ್ಲಿ ಸಾಕ್ಷಿದಾರರಾಗಿ ಸಹಿ ಮಾಡಿರುವ ಶೆಟ್ಟೆಪ್ಪ ಬರ್ಮ ಸೈಬಣ್ಣವರ್, ಇಸ್ಮಾಯಿಲ್ ಸಾಬ್ ಮೀರಾಸಾಬ್ ಮುಲ್ಲಾ, ಪಾಯಣ್ಣ ಮಲ್ಲಪ್ಪ ಕಾಕತಕರ್, ಇಟ್ಟಪ್ಪ ಮರೇಪ್ಪ ಸೈಬಣ್ಣವರ್, ಮಲ್ಲಪ್ಪ ಶೆಟ್ಟೆಪ್ಪ ಸೈಬಣ್ಣವರ್ ರವರು ನನಗೆ ಪರಿಚಯ ಇರುವುದಿಲ್ಲ. ನಾನು ದಾಮಣೆ ಗ್ರಾಮಕ್ಕೆ ನನ್ನ ಜಮೀನು ಇರುವ ಕಾರಣ ಹೋಗುವುದು - ಬರುವುದು ಮಾಡುತ್ತಿರುತ್ತೇನೆ. ನಾನು ಸದರಿ ಗ್ರಾಮಕ್ಕೆ ಹೋಗುವುದು - ಬರುವುದು ಮಾಡುವ ಕಾರಣ ನನಗೆ ಸದರಿ ಗ್ರಾಮದವರಾದ ಮೇಲೆ ಹೇಳಿದ ಸಾಕ್ಷಿದಾರರು ಪರಿಚಯವಿರಬೇಕು ಎಂದರೆ ಸಾಕ್ಷಿ ನನಗೆ ಅವರ ಕುರಿತು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಮೇಲೆ ಹೇಳಿದ ವ್ಯಕ್ತಿಗಳುನಮ್ಮ ಜಮೀನಿನ ಅಕ್ಕ - ಪಕ್ಕದ ಜಮೀನಿನವರೇ ಆಗಿರುತ್ತಾರೆ ಎಂದರೆ ಸರಿ. ಆದರೂ ಸಹಾ ನನಗೆ ಅವರ ಪರಿಚಯ ಇರುವುದಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಂದೆ 2007ನೇ ಇಸವಿಯಲ್ಲಿ ಮರಣಹೊಂದಿರುತ್ತಾರೆ. ಈ ದಾವೆ ಹೂಡುವ ಮೊದಲು ಮಾರುತಿ ಮರಗನ್ನಾಚೆ ರವರು ನಮಗೆ ದಾವಾ ಸ್ವತ್ತಿನ ಕುರಿತು ಖರೀದಿ ಪತ್ರ ಬರೆದುಕೊಡುವಂತೆ ನೋಟೀಸ್ ನೀಡಿರುತ್ತಾರೆ ಎಂದರೆ ಸರಿಯಲ್ಲ. 2012ನೇ ಇಸವಿಯಲ್ಲಿ ಮಾರುತಿ ಮರಗನ್ನಾಚೆ ರವರು ನಮ್ಮ ಜಮೀನುಗಳನ್ನು ಬಿಟ್ಟು ಹೋಗಬೇಕೆಂದು ದಾವೆ ಹೂಡಿರುತ್ತೇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು 2013ನೇ ಇಸವಿಯಲ್ಲಿ ತಾನು ಮಾರುತಿರವರಿಗೆ ಹಣ ನೀಡಿರುವುದಾಗಿ ನುಡಿಯುತ್ತಾರೆ. 2012 ರಿಂದ ಇಲ್ಲಿಯವರೆಗೂ

ಮಾರುತಿ ಮರಗನ್ನಾಚೆ ರವರೇ ಜಮೀನಿನ ಕಬ್ಜೆಯಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹಣ ಕೊಟ್ಟು ಕಬ್ಜೆ ವಾಪಸ್ಸು ಪಡೆದಿರುವುದಾಗಿ ನುಡಿಯುತ್ತಾರೆ. ಅಸಲುದಾವಾ ಸಂಖ್ಯೆ 725/2013 ರಲ್ಲಿನ ವಾದಿಯರು ಉಳಿದ ಕ್ರಯದ ಪ್ರತಿಫಲವಾದ 500/- ರೂ.ಗಳನ್ನು ಕೊಟ್ಟು ಕ್ರಯಪತ್ರ ಮಾಡಿಕೊಳ್ಳಲು ತಯಾರು ಇರುತ್ತಾರೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**
**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**
**ಬೆಳಗಾವಿ.**